ಸಿದ್ದೇಶ್ ಸಣ್ಣಗಿರಿ ಕೊಟ್ಟೂರು

# ಕುಬೇರನ ಅಹಂಕಾರ

ಕುಬೇರನಿಗೆ ತಾನು ಮೂರು ಲೋಕಗಳಲ್ಲಿ ಎಲ್ಲರಿಗಂತ ಹೆಚ್ಚು ಶ್ರೀಮಂತನೆಂಬ ಅಹಂಕಾರವಿತ್ತು. ಆಗಾಗ ಅವನು ತನ್ನ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಲೂ ಇದ್ದನು. ಭೂಲೋಕದ ರಾಜ ಮಹಾರಾಜರು ಹಾಗೂ ದೇವತೆಗಳನ್ನು ಭೋಜನಕ್ಕೆ ಒಮ್ಮೊಮ್ಮೆ ಆಹ್ವಾನಿಸುತ್ತಿದ್ದ.

ಈಶ್ವರನನ್ನು ಆಹ್ವಾನಿಸಿ ತನ್ನ ಶ್ರೀಮಂತಿಕೆಯನ್ನು ಅವನ ಮುಂದೆ ಪ್ರದರ್ಶಿಸಬೇಕೆಂಬ ವಿಚಾರ ಅವನ ಮನಸ್ಸಿಗೆ ಬಂದಿತು. ತಕ್ಷಣವೇ ಕೈಲಾಸಕ್ಕೆ ಪ್ರಯಾಣ ಬೆಳೆಸಿ ಈಶ್ವರನಿಗೆ ನಮಸ್ಕರಿಸಿ ತಾನು ಬಂದಿರುವ ಉದ್ದೇಶವನ್ನು ಅರಿಕೆ ಮಾಡಿಕೊಂಡನು. ಈಶ್ವರ, 'ನನಗೆ ಈಗ ಬರಲು ಆಗುತ್ತಿಲ್ಲ. ಬೇಕಾದರೆ ಪಾರ್ವತಿ ದೇವಿಯನ್ನು ಕಳುಹಿಸುತ್ತೇನೆ' ಎಂದು ಹೇಳಿದ. ಈಶ್ವರ ಪಾರ್ವತಿಯನ್ನು

